**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ. 1571/2022**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಚಿಕ್ಕಣ್ಣ | ಸಿ.ಡಬ್ಲ್ಯೂ – 1 |
| ತಂದೆ ಹೆಸರು | : | ಪೂಜಾರಿ ಸಿರಿಯಣ್ಣ | ಪಿ.ಡಬ್ಲ್ಯೂ – 1 |
| ವಯಸ್ಸು | : | 66 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ದೊಡ್ಡೇರಿ ಗ್ರಾಮ | ದಿಃ 29–04–2026. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ಚಾಸಾ–2 ನನ್ನ ಹೆಂಡತಿ. 1 ನೇ ಆರೋಪಿ ನನ್ನ ತಮ್ಮ. 2 ನೇ ಆರೋಪಿ ನನ್ನ ಸೊಸೆ. 3 ನೇ ಆರೋಪಿ ನಮ್ಮ ಗ್ರಾಮಸ್ಥರು.

ಈಗ್ಗೆ 20 ವರ್ಷಗಳ ಹಿಂದೆ ದೊಡ್ಡೇರಿ ಗ್ರಾಮದಲ್ಲಿ ನನ್ನ ತಂದೆ 40 * 50 ಅಳತೆಯ ನಿವೇಶವನ್ನು ಖರೀದಿಸಿದ್ದರು. ಸದರಿ ನಿವೇಶನವು ನನ್ನ ತಂದೆಯ ಹೆಸರಿನಲ್ಲಿತ್ತು. ಸೈಟಿನ ವಿಚಾರವಾಗಿ ನನಗೆ ಹಾಗೂ 1 ಮತ್ತು 2 ನೇ ಆರೋಪಿತರ ನಡುವೆ ಗಲಾಟೆ ನಡೆದಿರುತ್ತದೆ.

ಈಗ್ಗೆ 4 ವರ್ಷಗಳ ಹಿಂದೆ ದೊಡ್ಡೇರಿ ಯಿಂದ ಗೇಟಿಗೆ ಟೀ ಕುಡಿಯುವ ಸಲುವಾಗಿ ಸಂಜೆ 06–00 ಗಂಟೆ ಸಮಯದಲ್ಲಿ ಬರುತ್ತಿದ್ದಾಗ, 1 ಮತ್ತು 2 ನೇ ಆರೋಪಿತರು ನನ್ನನ್ನು ಕೆಳಗೆ ಕೆಡವಿ ಕೊರಳು ಪಟ್ಟಿ ಹಿಡಿದು ಕೈಗಳಿಂದ ನನಗೆ ಹೊಡೆದಿರುತ್ತಾರೆ. ನಂತರ 3 ನೇ ಆರೋಪಿಯು ದೊಣ್ಣೆಯಿಂದ ಸೊಂಟ, ರಟ್ಟೆಗೆ ಮತ್ತು ಬೆನ್ನಿಗೆ ಹೊಡೆದಿರುತ್ತಾರೆ. ಆಗ ನಾನು ಕೆಳಗೆ ಬಿದ್ದಿರುತ್ತೇನೆ. ಆಗ ಚಾಸಾ–3 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ. ನಂತರ ನನ್ನ ಹೆಂಡತಿ ಗಲಾಟೆ ಬಿಡಿಸಲ ಸ್ಥಳಕ್ಕೆ ಬಂದಿರುತ್ತಾರೆ. ಆರೋಪಿತರು ಚಾಸಾ–2 ರವರನ್ನು ಅತ್ತ ಇತ್ತ ಎಳೆದಾಡಿ ಕೆಳಗೆ ಕೆಡವಿ ಹೊಡೆದಿರುತ್ತಾರೆ. ಸೈಟಿನ ವಿಚಾರಕ್ಕೆ ಬಂದರೆ ಕೊಲೆ ಮಾಡುವುದಾಗಿ ಹೆದರಿಸಿರುತ್ತಾರೆ.

ನಂತರ ನಾನು, ಚಾಸಾ–2 ಮತ್ತು ನನ್ನ ಮಗಳು ಈರಮ್ಮ ಆಸ್ಪತ್ರೆಗೆ ಹೋಗಿರುತ್ತೇವೆ. ಆಸ್ಪತ್ರೆಗೆ ಪೊಲೀಸರು ಬಂದು ನನ್ನ ಹೇಳಿಕೆ ದೂರನ್ನು ಪಡೆದಿರುತ್ತಾರೆ.

ಸಾಕ್ಷಿಗೆ ಹೇಳಿಕೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ. ಹೇಳಿಕೆ ದೂರನ್ನು ನಿಪಿಃ1 ಅಂತ, ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನಿಪಿಃ 1(ಎ) ಅಂತ ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ದೊಣ್ಣೆಯನ್ನು ನೋಡಿ ಆರೋಪಿತರು ಹಲ್ಲೆಗೆ ಉಪಯೋಗಿಸಿದ ಮೇರೆಗೆ ಸದರಿ ದೊಣ್ಣೆಯನ್ನು ಮು.ಮಾ-1 ಅಂತ ಗುರುತಿಸಲಾಯಿತು.

**( ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ**

ದಿನಾಂಕ 28.04.2022 ರಂದು ಗಲಾಟೆ ನಡೆದಿರುತ್ತದೆ ಎಂದರೆ ಸರಿ. ನಾನು ಬಸ್ ನಿಲ್ದಾಣಕ್ಕೆ ನನ್ನನ್ನು 1 ಮತ್ತು 2 ನೇ ಆರೋಪಿತರು ಅಡ್ಡಗಟ್ಟಿ ತಡೆದಿರುತ್ತಾರೆ ಎಂದರೆ ಸರಿ. 1 ಮತ್ತು 2 ನೇ ಆರೋಪಿರು ಸೂಳೆಮಗನೆ, ಬೋಳಿಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ವಿ.ಜಿ.ಪಿ., ಆರೋಪಿ ಪರ ವಕೀಲರಿಂದಃ**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಿಪಿ.1 ಅನ್ನು ನಮ್ಮ ಸಂಬಂಧಿಕರು ಬರೆದಿದ್ದು, ಸದರಿಯವರ ಹೆಸರು ಹೇಳಲು ನೆನಪಿಲ್ಲ. ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ದೂರನ್ನು ನೀಡಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. ಚಾಸಾ-2 ರಿಂದ 6 ರವರು ನನ್ನ ಹತ್ತಿರದ ಸಂಬಂಧಿಕರು. ಸಂಜೆ 05-00 ಗಂಟೆಯಿಂದ 06-00 ಗಂಟೆಯವರೆಗೆ ಗಲಾಟೆ ನಡೆದಿರುತ್ತದೆ. ಸದರಿ ವಿಚಾರವನ್ನು ದೂರಿನಲ್ಲಿ ಹೇಳಿ ಬರೆಸಿರುತ್ತೇನೆ. ಗಲಾಟೆ ನಡೆಯುವ ಸಮಯದಲ್ಲಿ ಸುಮಾರು 20 ಜನ ಸೇರಿದ್ದರು. ಸದರಿಯವರೆಂದರೆ ಗೋಪಾಲಿ, ಅಜ್ಜವ್ವ , ಪ್ರತಿಭ, ಸಿರಿಯಣ್ಣ, ನಾಗಣ್ಣ, ಈರಣ್ಣ, ಚಿಕ್ಕಮ್ಮರವರು ಹಾಜರಿದ್ದರು. ಈ ಹೇಳಿದ ವ್ಯಕ್ತಿಗಳು ಘಟನಾ ಸಮಯದಲ್ಲಿ ಹಾಜರಿದದರು ಎಂದು ದೂರಿನಲ್ಲಿ ಹೇಳಿ ಬರೆಸಿರುವುದಿಲ್ಲ. ಸದರಿಯವರು ಘಟನಾ ಸ್ಥಳದಲ್ಲಿ ಇದ್ದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

ನಿವೇಶನದ ಖಾತೆ ನಂಬರ್ ನನಗೆ ಹೇಳಲು ಗೊತ್ತಿಲ್ಲ. ನಿವೇಶನಕ್ಕೆ ಸಂಬಂಧಿಸಿದ ದಾಖಲೆಯನ್ನು ಪೊಲೀಸರಿಗೆ ನೀಡಿರುತ್ತೇನೆ. ನಾನು 1 ಮತ್ತು 2 ನೇ ಆರೋಪಿತರ ವಿರುದ್ಧ ಇದೇ ನ್ಯಾಯಾಲಯದಲ್ಲಿ ಓ ಎಸ್ 160/2019 ರ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ಸರಿಯಾಗಿ ನ್ಯಾಯಾಲಯಕ್ಕೆ ಹಾಜರಾಗದ ಕಾರಣ ದಾವೆಯನ್ನು ವಜಾ ಗೊಳಿಸಲಾಗಿರುತ್ತದೆ ಎಂದರೆ ಸರಿಯಲ್ಲ. 3 ನೇ ಆರೋಪಿಯನ್ನು ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಲು ಅರ್ಜಿಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿಯನ್ನು ನ್ಯಾಯಾಲಯ ವಜಾ ಗೊಳಿಸಿರುತ್ತದೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ವಜಾ ಮಾಡಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆಸ್ಪತ್ರೆಗೆ ಬಂದಾಗ ಸಂಜೆ 06-15 ರಿಂದ 06-30 ಆಗಿತ್ತು. ಆಸ್ಪತ್ರೆಗೆ ನಾನು ಮತ್ತು ನನ್ನ ಹೆಂಡತಿ ಬಸ್ಸಿನಲ್ಲಿ ಬಂದಿರುತ್ತೇವೆ. ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರನ್ನು ಹೇಳಲು ಆಗುವುದಿಲ್ಲ. ಪೊಲೀಸರು ನನ್ನ ಹೇಳಿಯನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಗೆ ಪಡೆದಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಪೊಲೀಸರು ಒಂದು ಬಾರಿ ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದಿರುತ್ತಾರೆ. ಜಗಳವನ್ನು ಚಾಸಾ-3 ಮತ್ತು ಸಿರಿಯಾ ರವರು ಜಗಳ ಬಿಡಿಸಿರುತ್ತಾರೆ. ಚಾಸಾ-3 ರವರು ಈಗ ಮೃತರಾಗಿರುತ್ತಾರೆ. ಚಾಸಾ-3 ಮತ್ತು ಸಿರಿಯಾರವರು ಸ್ಥಳದಲ್ಲಿ ಇರದೇ ಇದ್ದರೂ ಜಗಳ ಬಿರಿಸಿರುತ್ತಾರೆ ಎಂದು ಹೇಳುವುವುದು ಸುಳ್ಳು ಎಂದರೆ ಸರಿಯಲ್ಲ.

ಚಳ್ಳಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಮೂರು ದಿನ ಚಿಕಿತ್ಸೆ ಪಡೆದಿರುತ್ತೇನೆ. ನಂತರ ದುರ್ಗದಲ್ಲಿ ಎಕ್ಸ್ ರೇ ಮಾಡಿಸಿರುತ್ತೇನೆ. ಚಿತ್ರದುರ್ಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದೂರಿನಲ್ಲಿ ನಮೂದಿಸಿರುವುದಿಲ್ಲ. ನಾನು ಚಿತ್ರದುರ್ಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ಏತಕ್ಕಾಗಿ ಚಿಕಿತ್ಸೆ ಪಡೆದಿರುತ್ತೇನೆ ಎಂದು ನನಗೆ ಹೇಳಲು ಆಗುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ವಕೀಲರೊಂದಿಗೆ ವಿನಾ ಕಾರಣ ಜಗಳ ಮಾಡುತ್ತಾ ನ್ಯಾಯಾಲಯದ ಸಮಯವನ್ನು ವ್ಯರ್ಥ ಮಾಡಿರುತ್ತಾರೆ.** )

ಮು.ಮಾ-1 ಎಷ್ಟು ಉದ್ದ ಮತ್ತು ದಪ್ಪ ಇರುತ್ತದೆ ಎಂದು ಹೇಳಲು ಆಗುವುದಿಲ್ಲ. ಸಾಮಾನ್ಯವಾಗಿ ಮು ಮಾ-1 ತರಹದ ಕಟ್ಟಿಗೆ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ.

ದಿನಾಂಕ 28.04.2022 ರಂದು ಸಂಜೆ 06-00 ಗಂಟೆಗೆ 1 ನೇ ಆರೋಪಿಯು ನಮ್ಮ ಮನೆಯ ಮುಂದೆ ನಡೆದುಕೊಂಡು ಹೋಗುವಾಗ ನಾನು ಮತ್ತು ಚಾಸಾ-2 ರವರನ್ನು ಅಡ್ಡಗಟ್ಟಿ ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು 1ನೇ ಆರೋಪಿಯ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಇತ್ಯರ್ಥದಲ್ಲಿದ್ದರು ಏತಕ್ಕಾಗಿ ಅಕ್ರಮವಾಗಿ ಕಟ್ಟಡ ಕಟ್ಟುತ್ತೀದ್ದೀರಾ ಎಂದು ಜಗಳ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು, ನನ್ನ ಹೆಂಡತಿ ಮತ್ತು ನನ್ನ ಮಗಳು ಆರೋಪಿತರ ಮೇಲೆ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಹಲ್ಲೆ ಮಾಡಿರುತ್ತೇವೆ ಎಂದು ನಮ್ಮ ವಿರುದ್ಧ ದೂರನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಅದಕ್ಕಾಗಿ ಆರೋಪಿತರಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಹಾಗೂ ಹಲ್ಲೆ ಮಾಡದೇ ಇದ್ದರೂ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ.1 ರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸಾಕ್ಷಿಯ ನಾನು ಓದಿಲ್ಲದ ಕಾರಣ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ವೈದ್ಯರೊಂದಿಗೆ ಷರೀಕಾರಿ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ಸೃಷ್ಟಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಯಾವುದೇ ನಿವೇಶನವನ್ನು ಖರೀದಿಸದೇ ಇಲ್ಲದೇ ಇದ್ದರೂ ಕ್ರಯಕ್ಕೆ ಪಡೆದಿರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿ ಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,

ನ್ಯಾಯಾಧೀಶರು, ಚಳ್ಳಕೆರೆ